I.D. 13/21
R.W.1

ದಿನಾಂಕ 12-04-2023 ರಂದು ಆರ್.ಡಬ್ಲ್ಯು-1 ರವರನ್ನು ಮರಳಿ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಎದುರುದಾರರ ಪರ ಶ್ರೀ ಎ.ಕೆ.ಬಿ ವಕೀಲರಿಂದ**

25.ಸದರಿ ಅಪಾದನೆಯ ಕುರಿತಾದ ಘಟನೆಯ ಸಿಸಿ ಟಿವಿ ದ್ರಶ್ಯಾವಳಿಗಳು ಇರುವ ಎರಡು ಸಿಡಿಗಳನ್ನು ಹಾಜರುಪಡಿಸಿದ್ದೇನೆ. ಇಂದು ಸದರಿ ದ್ರಶ್ಯಾವಳಿಯ ಕುರಿತಾಗಿ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ಅಡಿಯಲ್ಲಿನ ಪ್ರಮಾಣ ಪತ್ರ ಹಾಜರುಪಡಿಸಿದ್ದೇನೆ. ಸದರಿ ಎರಡು ಸಿಡಿಗಳಲ್ಲಿರುವ ಸಿಸಿ ಟಿವಿ ದ್ರಶ್ಯಾವಳಿಯನ್ನು ತೆರೆದ ನ್ಯಾಯಾಲಯದಲ್ಲಿ ಲ್ಯಾಪ್ ಟಾಪ್ ಮೂಲಕ ವೀಕ್ಷಿಸಿಸಿತು. ಕಾರಣ ಸದರಿ ಸಿಸಿ ಟಿವಿ ದ್ರಶ್ಯಾವಳಿಯ ಎರಡು ಸಿಡಿಯನ್ನು ನಿಶಾನೆ ಆರ್-28 ಮತ್ತು 29 ಎಂದು ಗುರುತಿಸಿತು.

26. ಸದರಿ ಸಿಸಿ ಟಿವಿ ದ್ರಶ್ಯಾವಳಿಯ 6 ಸ್ಕ್ರೀನ್ ಶಾಟ್ ಗಳನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ಒಟ್ಟಾಗಿ ನಿಶಾನೆ ಆರ್ - 30 ಎಂದು ಗುರುತಿಸಿತು.

27. ಮಲ್ಪೆ ಪೊಲೀಸ್ ಠಾಣೆಯವರು ಮಾಡಿದ ಘಟನಾ ಸ್ಥಳದ ಪಂಚನಾಮೆ ಹಾಗೂ ತನಿಖೆಗೆ ಸಂಬಂಧಪಟ್ಟ ದಾಖಲೆಗಳ ನಕಲುಗಳನ್ನು ಹಾಜರುಪಡಿಸಿದ್ದೇನೆ ಅವುಗಳನ್ನು ನಿಶಾನೆ ಆರ್- 31 ಎಂದು ಗುರುತಿಸಿತು.

ಎದುರುದಾರ ಪರ ವಕೀಲರ ಮನವಿ ಮೇರೆಗೆ ಉಳಿದ ಮುಖ್ಯವಿಚಾರಣೆಯನ್ನು ಮುಂದೂಡಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಶಾಂತವೀರ ಶಿವಪ್ಪ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಉಡುಪಿ

I.D. 13/21
R.W.1